ಏನಾಕಾರಣ ತೊಂದರೆ ಕೊಡುತ್ತಾರೆ, ದ್ರೋಹ ಮಾಡುತ್ತಾರೆ, ಅವರ ಪ್ರತಿಯೊಬ್ಬರ ನಿಟ್ಟುಸಿರು ಸಂಬಂಧಪಟ್ಟವರ ಮೇಲೆ ಆಟಂಬಾಂಬ್ ಆಗಿ ತಗುಲುತ್ತದೆಂದು ನಾನು ಎಷ್ಟೋ ಸಾರಿ ಸದನದಲ್ಲಿ ಹೇಳಿದ್ದೇನೆ, ಈಗಲೂ ಹೇಳುತ್ತಿದ್ದೇನೆ. ಆ ಮಹಾಪುರುಷರಾರು?

ಡಾ: ಎ.ಬಿ.ಮಾಲಕರೆಡ್ಡಿ: 1995ರ ಮಾರ್ಚ್ ತಿಂಗಳಲ್ಲಿ ಮುಖ್ಯಮಂತ್ರಿಯಾಗಿದ್ದವರಾರೆಂಬುದು ಅವರಿಗೆ ಗೊತ್ತಿದೆ. ನಾನೇಕೆ ಹೇಳಬೇಕು.

ಶ್ರೀ ಕೆ.ಹೆಚ್.ಹನುಮೇಗೌಡ: ತಾವು ಹೇಳಬೇಕು. ಏಕೆ ಹೇಳಬಾರದು? ಆಗ ಯಾರು ಮುಖ್ಯಮಂತ್ರಿಗಳಾಗಿದ್ದರೆಂಬುದನ್ನು ಹೇಳಿ. ಅದರಲ್ಲಿ ತಪ್ಪೇನೂ ಇಲ್ಲ. ನಿಮಗೆ ಅವರ ದಾಕ್ಷಿಣ್ಯವಿಲ್ಲ. ಹೆಸರು ಹೇಳಿ, ಇಂಥಿಂಥ ಉತ್ತಮವಾದ ಕಾರ್ಯ ಮಾಡಿದ್ದಾರೆಂದು ದೇಶಕ್ಕೆ ಗೊತ್ತಾಗಲಿ. ಆ ಗ್ರಾಮದ 15 ಕಿ.ಮೀ. ಸುತ್ತುಮುತ್ತಲು ಒಂದೂ ಆಸ್ಪತ್ರೆಯಿಲ್ಲ. ಆ ಜನರು ಎಷ್ಟು ಕಣ್ಣೀರು ಹಾಕುತ್ತಿದ್ದಾರೆ. 15-20 ಕಿ.ಮೀ. ದೂರ ಹೋಗಲು ಆಗದೆ ಗರ್ಭಿಣಿ ಹೆಂಗಸರು ಸತ್ತಿದ್ದಾರೆ. ಅಂತಹ ತೊಂದರೆ ಆಗಿದೆ. ಇವೆಲ್ಲವನ್ನೂ ಗಮನಕ್ಕೆ ತಂದ ಮೇಲೆ ನೀವು ಆಸ್ಪತ್ರೆಯನ್ನು ಮಂಜೂರು ಮಾಡಿದ್ದು. ನಂತರ, ಅದನ್ನು ವಜಾ ಮಾಡಲು ಕಾರಣ ಗೊತ್ತಿಲ್ಲವೆನ್ನುತ್ತೀರಿ. ಹೆಸರು ಹೇಳುವುದಕ್ಕೇನು ನಿಮಗೆ ತೊಂದರೆ?

ಅಧ್ಯಕ್ಷರು: ಅಲ್ಲಿ ಇನ್ನೊಂದು ಆಸ್ಪತ್ರೆ ತೆರೆಯುವ ಏರ್ಪಾಡು ಮಾಡಿ.

ಶ್ರೀ ಡಿ.ಪಿ.ಸದಾನಂದಗೌಡ: ಕೇವಲ ರಾಜಕೀಯ ಹಿತಾಸಕ್ತಿಗಳಿಗಾಗಿ ಇಂಥ ಒಳ್ಳೆಯ ಕಾರ್ಯಗಳು ವ್ಯತ್ಯಾಸವಾಗಬಾರದು, ಬದಲಾವಣೆಯಾಗಬಾರದು, ಈ ಮೆಸೇಜ್ ಇಡೀ ರಾಜ್ಯಕ್ಕೆ ಮತ್ತು ಎಲ್ಲಾ ರಾಜಕಾರಣಿಗಳಿಗೆ ಹೋಗಬೇಕೆಂಬುದು ಅವರ ಮೂಲ ಉದ್ದೇಶ.

ಡಾ: ಎ.ಬಿ.ಮಾಲಕರೆಡ್ಡಿ: ಪಟ್ಟಣವನ್ನು ಹೊರತುಪಡಿಸಿ, ಹಾಸನ ತಾಲ್ಲೂಕಿನ ಜನಸಂಖ್ಯೆ 2.2 ಲಕ್ಷ ಇದ್ದು, ಶಾಂತಿ ಗ್ರಾಮಕ್ಕೆ ಇನ್ನೊಂದು ಸಮುದಾಯ ಆರೋಗ್ಯ ಕೇಂದ್ರ ಕೊಡುವ ಸಾಧ್ಯತೆ ಉಂಟು. ನಾನು ಅದನ್ನು ಪರಿಶೀಲಿಸುತ್ತೇನೆ.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಭೂಮಿ ಮಾರಾಟ.

287(3552)

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಭೂ ಸುಧಾರಣೆ ಕಾನೂನಿನನ್ವಯ ಡಿಕ್ಲರೇಷನ್ ಕೊಟ್ಟು ಮಂಜೂರಾದ ಭೂಮಿ ಸರ್ಕಾರ ವಿಧಿಸಿದ ಷರತ್ತು ಮುಗಿದ ಮೇಲೆ ಅವರು ಖರೀದಿಸಿದ ಭೂಮಿ ಮಾರಾಟ ಮಾಡಲು ಸರ್ಕಾರ ಯಾವ ನಿಯಮ ವಿಧಿಸಿದೆ?

2. ಸದರಿ ಕಟ್ಟುಪಾಡುಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಅವರ ಆಯ್ಕೆಗೆ ಅನುಗುಣವಾಗಿ ನಿರ್ಧಾರ ತೆಗೆದುಕೊಂಡು, ಅವರು ಅಭಿವೃದ್ಧಿ ಹೊಂದಲು ತೊಂದರೆಯಾಗುವುದಿಲ್ಲವೇ;

3. ಹಾಲಿ ಇರುವ ಕಟ್ಟುಪಾಡುಗಳನ್ನು ತೆಗೆದು ಹಾಕಿ ಅವರು ಅಭಿವೃದ್ಧಿ ಹೊಂದಲು ಸರ್ಕಾರ ಅವಕಾಶ ಮಾಡಿಕೊಡುವುದೇ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

1. ಭೂ ಸುಧಾರಣೆ ಕಾಯ್ದೆ ಅಡಿಯಲ್ಲಿ ಭೂಮಿಯ ಸ್ವಾಧೀನಾನುಭವ ಪಡೆದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಅಥವಾ ಇನ್ನಾವುದೇ ವರ್ಗದ ವ್ಯಕ್ತಿಯಾಗಿರಲಿ ಅವರು ಸದರಿ ಜಮೀನನ್ನು ಭೂ ನ್ಯಾಯ ಮಂಡಳಿ ಕಲಂ ೪೮(ಎ) ಅಡಿಯಲ್ಲಿ ಅಂತಿಮ ಆದೇಶ ಹೊರಡಿಸಿದ ದಿನಾಂಕದಿಂದ 15 ವರ್ಷಗಳ ತನಕ ಮಾರಾಟ, ದಾನ, ಬದಲಾವಣೆ, ಭೋಗ್ಯ, ಗುತ್ತಿಗೆ, ಹಂಚಿಕೆ ಮೂಲಕ ವರ್ಗಾವಣೆ ಮಾಡುವ ಹಾಗಿಲ್ಲ. ಕರ್ನಾಟಕ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳ (ಹಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ, 1978ರ ಅಡಿಯಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳಿಗೆ ಸೇರಿದ ಜಮೀನನ್ನು ಮಾರಲು: ಕೊಳ್ಳಲು ಪೂರ್ಣ ನಿರ್ಬಂಧ ಇರುವುದರಿಂದ ಅವರು 15 ವರ್ಷಗಳ ನಂತರವೂ ಮಾರಾಟ ಮಾಡಲು ಬರುವುದಿಲ್ಲ. ಹಾಗೊಮ್ಮೆ 15 ವರ್ಷಗಳ ನಂತರ ಮಾರಾಟ ಮಾಡಲೇಬೇಕೆಂದರೆ ಪೂರ್ಣ ಪ್ರಮಾಣದ ಸಮರ್ಥನೆಯೊಂದಿಗೆ ಸರ್ಕಾರದ ಪೂರ್ವಾನುಮತಿ ಪಡೆಯಬೇಕಾಗುತ್ತದೆ.

2. ಇಲ್ಲ, ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರು ಹಾಗು ಅವರ ಜಮೀನುಗಳ ಹಿತ ಕಾಪಾಡಲು ಮೇಲ್ಕಂಡ ನಿರ್ಬಂಧಗಳನ್ನು ತರಲಾಗಿದೆ.

3. ಉದ್ಭವಿಸುವುದಿಲ್ಲ.

ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ: ಪಿಟಿಸಿಎಲ್ ಆಕ್ಟ್ ಮಾಡಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿ ಭೂ ಮಸೂದೆಯನ್ವಯ ಮಂಜೂರಾದ ಭೂಮಿಯನುಸಾರ ನೋಂದಾವಣೆ ಇಲಾಖೆಗೆ ಹೋದಾಗ, ಈ ಜಮೀನು ಪಿಟಿಸಿಎಲ್ ಕಾಯ್ದೆಯಡಿಯಲ್ಲಿ ಬರುವುದರಿಂದ, ನೋಂದಾಯಿಸಲು ಬರುವುದಿಲ್ಲವೆಂದು ಡಿಸಿ ಆಫೀಸಿನಲ್ಲಿ ಹೇಳುತ್ತಾರೆ. ಆ ಬಗ್ಗೆ ಸಚಿವರು ಏನಾದರೂ ನಿರ್ದೇಶನ ನೀಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಯಾವುದೇ ಕಾನೂನನ್ನು ಪರಿಶಿಷ್ಟ ಜಾತಿ: ವರ್ಗದವರಿಗೆಂದು ರಚಿಸಿದ್ದರೆ, ಅದು ಅವರ ಅನುಕೂಲಕ್ಕಾಗಿಯೇ ಹೊರತು ಅನಾನುಕೂಲಕ್ಕಲ್ಲ. ಅವರಿಗೆ ಜಮೀನು ಯಾವ ತಾರೀಖಿನಲ್ಲಿ ಮಂಜೂರಾಗಿರುತ್ತದೆ, ಅಲ್ಲಿಂದ ಭೂ ಕಾಯ್ದೆ ಪ್ರಕಾರ 15 ವರ್ಷಗಳವರೆಗೆ ಅದನ್ನು ಪರಭಾರೆ ಮಾಡುವ ಹಾಗಿಲ್ಲ. 15 ವರ್ಷಗಳ ನಂತರ ಸರ್ಕಾರದ ಪರ್ಮಿಷನ್ ತೆಗೆದುಕೊಂಡು ಮಾಡಬಹುದು. ಜಮೀನಿನ ಬೆಲೆಯ 50ರಷ್ಟು ಭಾಗವನ್ನು ಸರ್ಕಾರಕ್ಕೆ ಕೊಟ್ಟು ಪರಿವರ್ತನೆ ಮಾಡಿಕೊಳ್ಳಬಹುದು. ನಾವು ಎಲ್ಲಾ ಅನುಕೂಲಗಳನ್ನೂ ಮಾಡಿಕೊಟ್ಟಿದ್ದೇವೆ. ಇದೊಂದು ಅವರ ಹಿತದೃಷ್ಟಿಯಿಂದ ಮಾಡಿದ ಕಾಯ್ದೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ: ಭೂ ಮಸೂದೆಯನ್ವಯ ಮಂಜೂರಾದ ಭೂಮಿಯನ್ನು ಅವರು ಜಾತಿಯಾಧಾರದ ಮೇಲೆ ಕೊಡಲಿಲ್ಲ. 'ಉಳುವವನೇ ಭೂಮಿಯ ಒಡೆಯ' ಎನ್ನುವ ದೃಷ್ಟಿಯಲ್ಲಿ ನೀವು ಜಮೀನನ್ನು ಕೊಟ್ಟಿದ್ದೀರಿ. ಅದನ್ನು ತಾವು ಪಿಟಿಸಿಎಲ್ ಕಾಯ್ದೆಯಡಿಯಲ್ಲೇಕೆ ಅನ್ವಯಿಸುತ್ತೀರಿ? ನಮ್ಮ ಜಿಲ್ಲೆಯಲ್ಲಿ ತುಂಬಾ ಜನರಿಗೆ ತೊಂದರೆಯಾಗಿದೆ. ಅದನ್ನು ಸರಿಪಡಿಸಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಪಿಟಿಸಿಎಲ್ ಕಾಯ್ದೆ ಪ್ರಕಾರ, 15 ವರ್ಷಗಳ ನಂತರ ಪರ್ಮಿಷನ್ ಕೊಡಬಹುದು.

ಶ್ರೀ ಡಿ.ಪಿ.ಸದಾನಂದಗೌಡ: ನಿಜವಾಗಿ ಈ ಕಾಯ್ದೆ ಪರಿಶಿಷ್ಟ ಜಾತಿ: ವರ್ಗದವರ ಹಿತಕ್ಕಾಗಿಯೇ ರಚಿತವಾಗಿದೆ. ಹಲವಾರು ಸಂದರ್ಭಗಳಲ್ಲಿ ಅವರ ಮಕ್ಕಳು ವಿದ್ಯಾಭ್ಯಾಸ ಮಾಡುವುದಕ್ಕಾಗಲಿ ಅಥವಾ ಮತ್ತೊಂದು ಒಳ್ಳೆಯ ಭೂಮಿ ಪಡೆದುಕೊಳ್ಳುವಾಗ, ಪರಭಾರೆ ಮಾಡುವಂಥ ಸಂದರ್ಭದಲ್ಲಿ ಸರ್ಕಾರದಿಂದ ಅನುಮತಿ ಪಡೆಯಬೇಕಾಗುತ್ತದೆ. ಈ ಹಂತದಲ್ಲಿ ಕಾನೂನುಗಳು ತುಂಬಾ ಕ್ಲಿಷ್ಟವಾಗಿದ್ದು ಅವನಿಗೆ ದುಡ್ಡಿನ ಅವಶ್ಯಕತೆಯಿರುವುದರಿಂದ ಪರಭಾರೆ ಮಾಡಲಿಕ್ಕೆ ಆದಷ್ಟು ಬೇಗ ಅನುಮತಿ ಸಿಗುತ್ತಿಲ್ಲ ಎನ್ನುವುದು ಅವರ ಕೂರಗು. ಅಲ್ಲಿ ಏನಾಗಿದೆ ಎಂದರೆ, ನೀವು ಡಿಸಿ ಯವರಿಗೆ ಬರೆಯಬೇಕು, ನಂತರ ಅವರು ಅದನ್ನು ಅರ್ಜಿಯಲ್ಲಿ ಕೊಟ್ಟಿರುವ ಕಾರಣಗಳು ಹಾಗೂ ಜಮೀನು ಹೌದು ಅಲ್ಲವೋ ಎಂಬುದನ್ನು ವೆರಿಫೈ ಮಾಡಬೇಕು, ನಂತರ ಅನುಮತಿ ಕೊಡಬೇಕೆನ್ನುವ ಹಲವಾರು ಕಾರಣಗಳಿವೆ, ಇದನ್ನು ಸಡಿಲಗೊಳಿಸಿ ಆದಷ್ಟು ಬೇಗನೆ ಅವಶ್ಯಕತೆ ಇದ್ದಾಗ ಪರಭಾರೆಗೆ ಒತ್ತು ಕೊಡುವಂಥ ಕೆಲಸ ಕಾನೂನಿನಲ್ಲಿ ಆಗಬೇಕೆನ್ನುವುದು ಅವರ ಬೇಡಿಕೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಪರಿಶೀಲಿಸಿ ನೋಡೋಣ.